ಅಸಲು ದಾವೆ ಸಂಖ್ಯೆ - 118/2010
ಡಿ.ಡಬ್ಲ್ಯೂ - 01
ದಿನಾಂಕಃ 04-02-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ಎಮ್ ಎಸ್ ಬಿ  ವಕೀಲರಿಂದ**

ಈ ಹಿಂದೆ ಕೇಳಿದ ಮಿಸಲೇನಿಯಸ್ ನಂ. 369/1981 ರ ಪ್ರಕರಣದ ಬಗ್ಗೆ ಏನಾದರೂ ಪರಿಶೀಲೆನೆ ಮಾಡಿದ್ದೀರಾ ಎಂದರೆ, ಮಾಡಿರುವುದಿಲ್ಲ. ಪರಿಶೀಲನೆ ಮಾಡಲು ನನಗೆನೂ ಅವಶ್ಯಕತೆ ಅನಿಸಲಿಲ್ಲ. ಸದರಿ ಮಿಸಲೇನಿಯಸ್ ನಂ. 369/1981 ರ ಪ್ರಕರಣದಲ್ಲಿ  ಅರ್ಜಿದಾರರ ಪರಿವಾಗಿ ನೀವು ಮುಕ್ತಿಯಾರ ನಾತೆಯಿಂದ  ವಿಲ್ ನ ಮೇಲಿನ ಸಹಿಗಳ  ಸತ್ಯಾಸತ್ಯತೆ  ತಿಳಿದು ಕೊಳ್ಳಲು ತಜ್ಞರ ಅಭಿಪ್ರಾಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ಸದರಿ ಕೇಸನಲ್ಲಿ ಕುಂಬಾರವಾಡ ಮಸ್ಜಿದ್ ಅವರು ಆಧರಿಸತಕ್ಕಂತಹ  ವಿಲ್ಲನ ಮೇಲೆ ತಜ್ಞರು ಅಭಿಪ್ರಾಯಕ್ಕೆ ನೀಡಿರುತ್ತಾರೆ ಎಂದರೆ ಸರಿ. ಸದರಿ ತಜ್ಞರ ವರದಿಯ ಪ್ರಕಾರ ವಿಲ್ ನ  ಮೇಲಿದ್ದ ಸಹಿಯು ನವಾಜ ಖಾತುರವರದಲ್ಲ ಎಂದು ವರದಿ  ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.  ಸದರಿ  ಮಿಸಲೇನಿಯಸ್ ನಂ. 369/1981 ನ್ನು ನೀವು ಯಾಕೆ  ಮುಂದುವರೆಸಲಿಲ್ಲ  ಎಂದರೆ ಅದು ನಮ್ಮ ವಕೀಲರಿಗೆ ಗೊತ್ತಿರುತ್ತದೆ.

ಸದರಿ ಮಿಸಲೇನಿಯಸ್ ನಂ. 369/1981 ಪ್ರಕರಣವು 1994 ರಲ್ಲಿ ವಜಾಗೊಂಡಿದ್ದು ಅದನ್ನು ನಿಮ್ಮ ವಕೀಲರ ಮುಖಾಂತರ ಏಕೆ ವಜಾಗೊಂಡಿದ್ದು ಎಂದು ನೀವು ತಿಳಿದುಕೊಂಡಿದ್ದಿರಾ ಎಂದರೆ ಅಸಲು ದಾವೆ 171/1984  ರ ಮೇಲೆ ಗಮನ ಇರಲಿ ವಜಾಗೊಂಡ ಪ್ರಕರಣದ ಬಗ್ಗೆ ಗಮನಹರಿಸ ಬೇಡ ಎಂದು ಹೇಳಿರುತ್ತಾರೆ. ಕುಂಬಾರವಾಡ ಮಸ್ಜಿದ್ ರವರು ಆದರಿಸತಕ್ಕಂತಹ  ವಿಲ್ ನ ಆಸ್ತಿಯು ಏಕೆ ಬಿಡುವುದು  ಎಂದು ನೀವು ನಿಮ್ಮ ವಕೀಲರಿಗೆ ಕೇಳಲಿಲ್ಲವೆ ಎಂದರೆ, ಅದರ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ.

ಮಿಸಲೇನಿಯಸ್ ನಂ. 369/1981 ರಲ್ಲಿ ಬಂದ ತಜ್ಞರ ಅಭಿಪ್ರಾಯದ ಪ್ರಕಾರ ವಿಲ್  ಮೇಲಿನ ಸಹಿಯು ನಕಲು (ಪೊರ್ಜರಿ) ಆಗಿರುತ್ತದೆಯೋ ಅಥವಾ ಇಲ್ಲವೋ ಎಂದರೆ ನನಗೆ ಗೊತ್ತಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದು ಆರ್ ಎ ನಂ. 73/1994 ರ ಮೇಲ್ಮನವಿ, ಆದೇಶ ಪ್ರತಿಗಳು ಮತ್ತು ಅಂತಿಮ ಆದೇಶ ಪ್ರತಿಯನ್ನು ಹಾಜರುಪಡಿಸಿದ್ದು ಸಾಕ್ಷಿಯು ಅದನ್ನು ನೋಡಿ ಪರಿಶೀಲಿಸಿ ಸದರಿ ದಾಖಲೆಯು ಆರ್ ಎ ನಂ.73/1994 ಕ್ಕೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ. ಇಲ್ಲಿ ಪ್ರತಿವಾದಿಯ ಪರ ವಕೀಲರು ಸದರಿ ದಾಖಲೆಯು ನಿಪಿ ಮಾಡಲು ತಕರಾರರನ್ನು ಸಲ್ಲಿಸಿದ್ದು, ಸದರಿ ದಾಖಲೆಯನ್ನು ಪರಿಶೀಲಿಸಿ ಮಾನ್ಯ ನ್ಯಾಯಾಲಯದವರು ನಿಡಿದ ಪ್ರಮಾಣಿಕೃತ ಪ್ರತಿಯಾಗಿದ್ದು ಆದ್ದರಿಂದ ತಕರಾರನ್ನು ತಳ್ಳಿಹಾಕಿ ಸದರಿ ದಾಖಲೆಯನ್ನು ನಿಪಿ- 129 ಎಂದು ಗುರುತಿಸಲಾಯಿತು.

ತಜ್ಞರ ಅಭಿಪ್ರಾಯದ ವರದಿ ಬಂದ ಕೂಡಲೇ ಕುಂಬಾರವಾಡ ಮಸ್ಜಿದ ಮತ್ತು ಹಿಂಡಸಗೇರಿ ರವರ ಜೊತೆಯಲ್ಲಿ ನೀವು ಒಪ್ಪಂದ ಆಗಿದ್ದಕ್ಕೆ ಸದರಿ ಪ್ರಕರಣವನ್ನು ನೀವು ನಡೆಸಿರುವುದಿಲ್ಲ ಎಂದರೆ, ನವಾಜಖಾತು ರವರು ಸದರಿ ಆಸ್ತಿಯನ್ನು ವಿಲ್ ನ ಮುಖಾಂತರ ಬಿಟ್ಟು ಕೊಟ್ಟಿದ್ದಾರೆ ಎಂದು ಹಿಂಡಸಗೇರಿ ರವರು ನಮಗೆ ತಿಳಿಸಿದ್ದರಿಂದ ನಾವು ಸದರಿ ಪ್ರಕರಣದ ಬಗ್ಗೆ ನಾವು ಗಮನ ಹರಿಸಲಿಲ್ಲ. ನವಾಜಖಾತು ರವರ ಸಹಿಯನ್ನು ಸೃಷ್ಠಿಸಿ ಕುಂಬಾರವಾದ ಮಸ್ಜಿದ ರವರು ಮೃತ ಪತ್ರವನ್ನು ಪ್ರೊಬೆಟ್ ಮುಖಾಂತರ ಪಡೆದುಕೊಂಡು, ಸದರಿ ಪ್ರೊಬೆಟ್ ನ್ನು ಶಹಜಾದ ಬೇಗಂ ರವರು ಪ್ರಶ್ನಿಸಿದರೋ ಇಲ್ಲವೋ ಎಂದರೆ, ಪ್ರಶ್ನಿಸಿರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ.

ಕುಂಬಾರವಾಡ ಮಸ್ಜಿದ ರವರಿಗೆ ವಿಲ್ ನ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರು ಸಹ ನೀವು, ಶಹಜಾದ ಬೇಗಂ ಮತ್ತು ಹಿಂಡಸಗೇರಿ ರವರು ಅಸಲು ದಾವಾ ನಂ.171/1984 ನ್ನು ಕುಂಬಾರವಾಡ ಮಸ್ಜಿದ ಮುಖಾಂತರ ಮೇಲ್ಮನವಿಯನ್ನು ಸಲ್ಲಿಸಿ ಸದರಿ ಮೇಲ್ಮನವಿಯಲ್ಲಿ ರಾಜಿಯಾಗಿರುತ್ತೀರಿ ಎಂದರೆ, ಸುಳ್ಳು ಇರುತ್ತದೆ.

2007 ರಲ್ಲಿ ನಿಡಿ-18 ರಲ್ಲಿ ತೋರಿಸಿದ ಆಸ್ತಿಗಳ ಪ್ರಕಾರ ನಾವು ಕಬ್ಜೆಯನ್ನು ಪಡೆದುಕೊಂಡಿದ್ದೇವೆ ಎಂದು ಆಧರಿಸಿರುತ್ತೇವೆ ಎಂದರೆ ಸರಿ. ಮೇಲ್ಮನವಿ ಸಂಖ್ಯೆ 73/1994 ರಲ್ಲಿ ರಾಜಿಯಾಗುವ ವೇಳೆಯಲ್ಲಿ ವಿಲ್ ನ ಆಧರಿಸತಕ್ಕಂತಹ ಆಸ್ತಿಯು ನಿಮ್ಮ ಕಬ್ಜಾಗೆ ಬಂದಿರಲಿಲ್ಲ ಎಂದರೆ ಸಾಕ್ಷಿಯು ಬಂದಿರಲಿಲ್ಲ ಎಂದು ನುಡಿಯುತ್ತಾರೆ. ನಿಡಿ- 18 ರಲ್ಲಿ ಇರತಕ್ಕ ಆಸ್ತಿಯನ್ನು ಅಸಲು ದಾವಾ ಸಂಖ್ಯೆ 171/1984 ಕೇಸಿನಲ್ಲಿ ತೋರಿಸಲಿಲ್ಲ ಎಂದರೆ, ತೋರಿಸಿದ್ದೆವು ಎಂದು ನುಡಿಯುತ್ತಾರೆ. ಹಿಂಡಸಗೇರಿ ರವರು ಕಬ್ಜಾದಲ್ಲಿ ಇದ್ದಾಗ ಕಬ್ಜಾವನ್ನು ಬಿಟ್ಟುಕೊಡುವಂತೆ ಕೇಳಲು ನಿಮ್ಮ ಬಳಿ ಯಾವುದೇ ಕಬ್ಜಾ ಇರಲಿಲ್ಲ ಎಂದರೆ ಸರಿ.

ಅಸಲುದಾವಾ ಸಂಖ್ಯೆಃ 171/1984 ರಲ್ಲಿ ಕೋರ್ಟ ಆಫ್ ವಾರ್ಡ್ಸ ಬಳಿ ಇದ್ದ ಮೂವಬೆಲ್ಸ (Movables) ಆಸ್ತಿಗಳನ್ನು ತೋರಿಸಿರಲಿಲ್ಲ ಎಂದರೆ, ಮೂವೆಬಲ್ಸ ಎಂದು ತೋರಿಸಿದ್ದೆವು ಆದರೆ, ಅದು ಯಾವುದು ಎಂದು ತೋರಿಸರಿಲಿಲ್ಲ.

ಅಸಲುದಾವಾ ಸಂಖ್ಯೆಃ 171/1984 ರಲ್ಲಿ ಅಂತಿಮ ಆದೇಶದ ಆಧಾರದ ಮೇಲೆ ಡಿ ಸಿ ಮತ್ತು ಇತರರ ಮೇಲೆ ಕಬ್ಜಾ ಕೇಳಿ Ex No. 52/1999 ನ್ನು ಹಾಡಿದ್ದೀರಿ ಎಂದರೆ ಸರಿ. ಕುಂಬಾರವಾಡ ಮಸ್ಜಿದ ರವರ ವಿರುದ್ಧವು ಸಹ ಕಬ್ಜಾ ಕೇಳಿ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎಂದರೆ ಸರಿ. ಸದರಿ Ex No. 52/1999 ದಿಃ 29-11-1999 ರಂದು ದಾಖಲು ಮಾಡಿರುತ್ತೀರಿ ಎಂದರೆ ಸರಿ. ಅದರಲ್ಲಿ ಅನುಸೂಚಿ ಆಸ್ತಿಯನ್ನು ನಮೂದು ಮಾಡಿದ್ದೀರಿ ಎಂದರೆ ಸರಿ. ಸದರಿ Ex No. 52/1999 ನೀವು ದಿಃ 22-08-2000 ರಂದು ಮೆಮೊವನ್ನು ಸಲ್ಲಿಸಿ ಹಿಂಪಡೆದಿರುತ್ತೀರಿ ಎಂದರೆ ಸರಿ.

ನಂತರ ಕಬ್ಜಾ ಕೇಳಿ ಗೌರವಾನ್ವಿತ ಉಚ್ಚನ್ಯಾಯಾಲಯ ಕರ್ನಾಟಕ ಬೆಂಗಳೂರು ನಲ್ಲಿ ಡಬ್ಲ್ಯೂ ಪಿ ನಂ. 33190/2001 ನ್ನು ಡಿ ಸಿ, ಕೋರ್ಟ ಆಫ್ ವಾರ್ಡ್ಸ, ಉಪ ವಿಭಾಗಾಧಿಕಾರಿಗಳು, ಕೆ ಎಸ್ ಆರ್ ಟಿ ಸಿ ಮತ್ತು ರಾಜ್ಯ ಸರ್ಕಾರವನ್ನು ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದರೆ ಸರಿ. ಸದರಿ ಡಬ್ಲ್ಯೂ ಪಿ ನಂ. 33190/2001 ನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ನೋಡಿ ಸರಿ ಇರುತ್ತದೆ ಎಂದು ನುಡಿಯುತ್ತಾರೆ ಸದರಿ ದಾಖಲೆಯನ್ನು ನಿಪಿ- 130 ಎಂದು ಗುರುತಿಸಲಾಯಿತು.

ಸದರಿ ಡಬ್ಲ್ಯೂ ಪಿ ನಂ. 33190/2001 ನಂ. ವಜಾ ಆಗಿದ್ದು ಅದನ್ನು ಪ್ರಶ್ನಿಸಿ ರಿಟ್ ಅಪಿಲ್ ನಂ. 295/2002 ನ್ನು ಗೌರವಾನ್ವಿತ ಉಚ್ಚನ್ಯಾಯಾಲಯ ಕರ್ನಾಟಕ ಬೆಂಗಳೂರು ದಲ್ಲಿ ಹೂಡಿರುತ್ತೀರಿ ಎಂದರೆ ಸರಿ. ಸದರಿ ರಿಟ್ ಅಪಿಲ್ ನಂ. 295/2002 ವಜಾ ಗೊಂಡಿರುತ್ತದೆ ಎಂದರೆ ಸರಿ. ಸದರಿ ರಿಟ್ ಅಪಿಲ್ ನಂ. 295/2002 ನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ನೋಡಿ ಸರಿ ಇರುತ್ತದೆ ಎಂದು ನುಡಿಯುತ್ತಾರೆ ಸದರಿ ದಾಖಲೆಯನ್ನು ನಿಪಿ- 131 ಎಂದು ಗುರುತಿಸಲಾಯಿತು.

ಸದರಿ ರಿಟ್ ಅಪಿಲ್ ನಂ. 295/2002 ನಲ್ಲಿ ನ್ಯಾಯಾಲಯವು ನೀವು ಕಬ್ಜಾವನ್ನು ಕೇಳಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿ ಎಂದು ವೀಕ್ಷಿಸಿರುತ್ತಾರೆ (observation) ಎಂದರೆ, ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 171/1984 ರಲ್ಲಿ ರಿಟ್ ಅಪಿಲ್ 295/2002 ರಲ್ಲಿ ದರಕಾಸ್ತು ಅರ್ಜಿಯನ್ನು ನೀವು

ಸಲ್ಲಿಸಿರುವುದಿಲ್ಲ ಎಂದರೆ ಆ ಸಮಯದಲ್ಲಿ ನಮಗೆ ಆವಶ್ಯಕತೆ ಇರಲಿಲ್ಲ ಆದ್ದರಿಂದ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಅಸಲುದಾವಾ ಸಂಖ್ಯೆ: 171/1984 ರ ಅಂತಿಮ ಆದೇಶವನ್ನು 1994 ರಿಂದ 2006 ರ ವರೆಗೆ ದರಕಾಸ್ತು (execution) ಗೊಳಿಸಿಕೊಂಡಿರುವುದಿಲ್ಲ ಎಂದರೆ ಸರಿ. ದರಕಾಸ್ತನ್ನು ಮಾಡಬಾರದು ಎಂದು ಕಾನೂನು ತಜ್ಞರ ಅಭಿಪ್ರಾಯನ್ನು ಲಿಖಿತ ಬರವಣಿಗೆ ಮುಖಾಂತರ ಪಡೆದಿರುತ್ತೀರಾ ಎಂದರೆ, ಲಿಖಿತ ಬರವಣಿಗೆ ಮುಖಾಂತರ ಪಡೆದಿರುವುದಿಲ್ಲ. ಆದರೆ ಮೌಖಿಕವಾಗಿ ಪಡೆದಿರುತ್ತೇನೆ. ನೀವು ತಜ್ಞರ ಅಭಿಪ್ರಾಯ ಪಡೆದಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಜಿಲ್ಲಾಧಿಕಾರಿಗಳು ದಿ ಕೋರ್ಟ ಆಫ್ ವಾರ್ಡ್ಸ ಧಾರವಾಡ ರವರಿಗೆ ನೀವು ಒಂದು ಅರ್ಜಿಯನ್ನು ಬರೆದಿದ್ದೀರಿ ಎಂದರೆ ಸರಿ. ಸದರಿ ಅರ್ಜಿಯನ್ನು ನಿಪಿ-132 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯನ್ನು ಸಹಿಯನ್ನು 132 ಎ ಎಂದು ಗುರುತಿಸಲಾಯಿತು. ಸದರಿ ಅರ್ಜಿಯು ಅತಿಕ್ರಮಣ ತೆರವು ಗೊಳಿಸುವ ಸಲುವಾಗಿ ನೀಡಿರುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ಅರ್ಜಿಯಲ್ಲಿ ಕೆಲವರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಬರೆದಿರುತ್ತೀರಿ ಎಂದರೆ ಸಾಕ್ಷಿಯ ಅರ್ಜಿಯನ್ನು ಪರಿಶೀಲಿಸಿ, ಬರೆದಿರುತ್ತೇನೆ ಎಂದು ನುಡಿಯುತ್ತಾರೆ.

ಯಾವ ಯಾವ ಆಸ್ತಿಯಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ, ಬಹಳ ಆಸ್ತಿಗಳಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದರು. ಸದರಿ ಆಸ್ತಿಗಳನ್ನು ಹೇಳಲು ಆಗುವುದಿಲ್ಲ. ಸದರಿ ಅರ್ಜಿಯಲ್ಲಿ ಸಹಾಯಕ ಉಪ ವಿಭಾಗಾಧಿಕಾರಿಗಳು ಮತ್ತು ಕೋರ್ಟ ಆಫ್ ವಾರ್ಡ್ಸ ರವರು ದಾವಾ ಆಸ್ತಿಗಳಲ್ಲಿ ಕೆಲವು ಆಸ್ತಿಯನ್ನು ನಿಲಾವು (ಹರಾಜು) ಮಾಡುತ್ತಿದ್ದಾರೆ ಎಂದು ಬರೆದಿರುತ್ತೀರಿ ಎಂದರೆ ಸರಿ.

ನಿಡಿ-18 ರಲ್ಲಿ ತೋರಿಸತಕ್ಕಂತಹ ಆಸ್ತಿಗಳ ಕಬ್ಜಾವನ್ನು ಕೇಳಿ ನೀವು ಈ ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ನಾವು ಯಾವುದರಲ್ಲಿ ಕಬ್ಜಾ ಇರಲಿಲ್ಲವೋ ಆ ಆಸ್ತಿಗಳನ್ನು ಮಾತ್ರ ಅರ್ಜಿಯಲ್ಲಿ ನಮೂದಿಸಿದ್ದೇನೆ. ನಾನು ಕಬ್ಜಾ ತೆಗೆದುಕೊಂಡಿದ್ದೇನೆ ಎಂದು ಹೇಳಲಾದ ಆಸ್ತಿಗಳನ್ನು 2007 ರಿಂದ 2015 ರ ವರೆಗೆ ಉಪ ವಿಭಾಗಾಧಿಕಾರಿಗಳು ಮತ್ತು ಕೋರ್ಟ ಆಫ್ ವಾರ್ಡ್ಸ ರವರು ಹರಾಜು ಮಾಡುತ್ತಾ ಬಂದಿರುತ್ತಾರೆ ಎಂದರೆ ಸುಳ್ಳು ಇರುತ್ತದೆ. ಹರಾಜು ಪ್ರಕ್ರಿಯೆಯಲ್ಲಿ ಹರಾಜಿನಿಂದ ಪಡೆದ ಮೊತ್ತವನ್ನು ಸರ್ಕಾರದವರು ಪಡೆದುಕೊಂಡಿರುತ್ತಾರೆ ಎಂದರೆ ಸುಳ್ಳು.

ದಿಃ 26-06-2013 ಕ್ಕೆ ಡಿ ಸಿ ರವರಿಗೆ ಒಂದು ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ಕರ್ನಾಟಕ ಸರ್ಕಾರದ ಆದೇಶದ ಪ್ರಕಾರ ಸರ್ಕಾರವು ಕೆಲವು ಆಸ್ತಿಗಳ ಕಬ್ಜಾವನ್ನು ಕೊಟ್ಟಿರುತ್ತಾರೆ, ಇನ್ನೂಳಿದ ಆಸ್ತಿಗಳ ಕಬ್ಜಾವನ್ನು ಕೇಳಿ ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಹರಾಜಿನ ಮೊತ್ತವನ್ನು ಸಹ ಕೇಳಿರುತ್ತೀರಿ ಎಂದರೆ, ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಆಸ್ತಿಗಳನ್ನು ಹರಾಜು ಮಾಡಿ ಮೊತ್ತವನ್ನು ಕೋರ್ಟ ಆಫ್ ವಾರ್ಡ್ಸ್ ಖಾತೆಗೆ ಜಮಾ ಮಾಡಿ ಎಂದು ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ನೋಡಿ ಪರಿಶೀಲಿಸಿ ಸರಿ ಎಂದು ನುಡಿದಿದ್ದು ಸದರಿ ಅರ್ಜಿಯನ್ನು ನಿಪಿ-133 ಎಂದು, ಸಾಕ್ಷಿ ಸಹಿಯನ್ನು 133(ಎ) ಎಂದು ಗುರುತಿಸಲಾಯಿತು.

ನಿಡಿ-18 ರ ಪ್ರಕಾರ ಯಾವುದೇ ಆಸ್ತಿಗಳ ಕಬ್ಜೆ ನಿಮಗೆ ಸಿಕ್ಕಿರುವುದಿಲ್ಲ ಆದ ಕಾರಣ ಪತ್ರಗಳ ಮುಖಾಂತರ ನೀವು ಡಿಸಿ ರವರಿಗೆ ಅರ್ಜಿ ಸಲ್ಲಿಸಿರುತ್ತೀರಿ ಎಂದರೆ ಸುಳ್ಳು. ಗುಂಡೂರ ಗ್ರಾಮದಲ್ಲಿ ಇರುವ ಸರ್ವೆ ನಂ. 102 ಮತ್ತು 116 ಜಮೀನನ್ನು ಈಗಲಾ ಹರಾಜು ಮಾಡುತ್ತಿದ್ದಾರೆ ಎಂದರೆ ಸರಿ. ನಿಡಿ-18 ರ ಪ್ರಕಾರ ನೀವು ಡಿ ಸಿ ರವರ ಮುಖಾಂತರ ಕಬ್ಜಾವನ್ನು ಪಡೆದುಕೊಂಡಿದ್ದೇನೆ ಎಂದು ಆಧರಿಸುತ್ತಿದ್ದೀರಿ ಎಂದರೆ ಸರಿ.

2015 ರಲ್ಲಿ ಡಿಸಿ ರವರಿಗೆ, ಕೂಸುಗಲ್ಲ ಗ್ರಾಮ, ಮಂಟೂರ ಗ್ರಾಮ, ದೇಗೇರಿ ಗ್ರಾಮ, ನಾಗಶೆಟ್ಟಿ ಗ್ರಾಮ ಮತ್ತು ಸವಣೂರ ಗ್ರಾಮದಲ್ಲಿರುವ ಚಿಲ್ಲೂರ ಮತ್ತು ಗುಂಡೂರ ಗ್ರಾಮ, ಶಿಗ್ಗಾಂವಿ ತಾಲೂಕಿನ ಮಡಲಿ ಗ್ರಾಮ ಮತ್ತು ಹಾನಗಲ್ ತಾಲೂಕಿನ ಆಸ್ತಿಗಳನ್ನು ಹರಾಜು ಮಾಡಿ ಎಂದು ಅರ್ಜಿ ನೀಡಿರುತ್ತೀರಿ ಎಂದರೆ ಸರಿ. ಸದರಿ ಅರ್ಜಿಯನ್ನು ನಿಪಿ- 134 ಎಂದು ಗುರುತಿಸಲಾಯಿತು.

ದಿಃ 23-02-2013 ರಂದು ಗೌರವಾನ್ವಿತ ಉಚ್ಚ ನ್ಯಾಯಾಲಯದ ಆದೇಶದ ಡಬ್ಲ್ಯೂ ಪಿ ನಂ.11313/2003 ರ ಆದೇಶದ ಅನ್ವಯ ಸವಣೂರ ಗ್ರಾಮದ ಸರ್ವೆ ನಂ. 38,39,48,49 ರಲ್ಲಿ ಅತೀಕ್ರಮಣ ಮತ್ತು ಅನಧಿಕೃತ ಕಟ್ಟಡವನ್ನು ತೆರವುಗೊಳಿಸಿ ವಾರಸಾದರರಿಗೆ ಆಸ್ತಿಯನ್ನು ಹಸ್ತಾಂತರಿಸಿ ಪ್ರತ್ಯಕ್ಷ ಕಬ್ಜಾ ಕೊಡಿಸುವ ಕುರಿತು ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ಸದರಿ ಅರ್ಜಿಯನ್ನು ನಿಪಿ- 135 ಎಂದು ಗುರುತಿಸಲಾಯಿತು. ಈ ಅರ್ಜಿಯಲ್ಲಿ ನಮೂದಿಸಿರುವ ಸವಣೂರಿನ ಆಸ್ತಿಗಳು ನಿಡಿ- 18 ರಲ್ಲಿಯು ಸಹ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ನಿಡಿ- 18 ನ್ನು ಪರಿಶೀಲಿಸಿ, ನಮೂದಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ಮೇಲೆ ಉಪ ವಿಭಾಗಧಿಕಾರಗಳು ವ ಕೋರ್ಟ ಆಫ್

ವಾರ್ಡ್ಸ್ ರವರು ನಿಮಗೆ ಕಬ್ಜಾವನ್ನು ನೀಡಿದ ಬಗ್ಗೆ ದಾಖಲಾತಿಗಳನ್ನು ಹಾಜರುಜಪಡಿಸಿದ್ದೀರಾ ಎಂದರೆ, ಹಾಜರುಪಡಿಸಿದ್ದೇನೆ. ನೀವು ಅರ್ಜಿಯನ್ನು ನೀಡಿದ ನಂತರ ಕಬ್ಜಾದಾರರನ್ನು ಬಿಡಿಸಿ ನಿಮಗೆ ಕಬ್ಜಾವನ್ನು ನೀಡಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನೀಡದೆ ಇದ್ದರೂ ಸಹ ನೀಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಈ ಅರ್ಜಿಯನ್ನು ಸಲ್ಲಿಸಿದ ನಂತರ ಡಿಸಿ ವ ಕೋರ್ಟ ಆಫ್ ವಾರ್ಡ್ಸ್ ರವರು ಅನಧಿಕ್ಕತವಾಗಿ ಇರುವ ಕಬ್ಜಾದಾರರನ್ನು ಹೊರಗೆ ಹಾಕಿಸಿ ನಿಮಗೆ ಕಬ್ಜಾಕೊಟ್ಟಿದ್ದರ ಬಗ್ಗೆ ಯಾವ ದಿನಾಂಕ, ತಿಂಗಳು ಇಸವಿ ಎಂದು ಆದೇಶ ನೀಡಿರುತ್ತಾರೆ ಮತ್ತು ಕಬ್ಜೆ ಕೊಡಿಸಿರುತ್ತಾರೆ ಎಂದರೆ ನನಗೆ ದಿನಾಂಕ, ತಿಂಗಳು ನೆನೆಪು ಇರುವುದಿಲ್ಲ ಆದರೆ 2007 ನೇ ವರ್ಷದಲ್ಲಿ ನೀಡಿರುತ್ತಾರೆ. ನಾನು ಆಧರಿಸತಕ್ಕಂತಹ 2007 ರಲ್ಲಿ ಆದ ಕಬ್ಜಾ ಆದೇಶವನ್ನು ಬಿಟ್ಟು ಡಿ ಸಿ ರವರು ಬೇರೆ ಆದೇಶವನ್ನು ಮಾಡಿರುವುದಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.